(೮) ಬೈಂದೂರಿನಲ್ಲಿ ನಾಡ ಕಚೇರಿಗಳಿಗೆ ಅಧಿಕಾರಿಗಳನ್ನು ನೇಮಿಸುವುದು'

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ,

''ನಾಡಿಗೆ ಸ್ವಾತಂತ್ರ್ಯ ಬಂದ ದಿನ, ಈ ವರ್ಷ
ಬೈಂದೂರಿನಲ್ಲಿ ಜನಕ್ಕೆಲ್ಲ ಹರ್ಷ
ಕಾರಣ, ಕಂದಾಯ ಇಲಾಖೆ ತೆರೆದ ನಾಡ ಕಛೇರಿ
ಅದಕೆನ್ನೂ ಬಂದಿಲ್ಲ ಬೇಕಾದ ಅಧಿಕಾರಿ
ಇದರಿಂದ ಜನಕ್ಕೆಲ್ಲ ಇಂದಿಗೂ ಕಿರಿಕಿರಿ
ನಿಯಮ ಷಿಳಿರಂತೆ ನನ್ನ ಪ್ರಶ್ನೆ ಇದು ಜನರ ಎದೆಯಾಳದ ನೋವಿನ
ಪ್ರಶ್ನೆ ಎಂದಾಗುವುದು ಸರಕಾರದಿಂದ ನೇಮಕ ಆರಂಭವಾಗಲಿಕೆ ನಾಡಕಛೇರಿಯ ಕಾಯಕ ?

ಎಂದಾಗುವುದು ಸರ್ಕಾರದಿಂದ ನೇಮಕ ಎಲ್ಲ ನಾಡಕಛೇರಿಗಳ ಕಾಯಕ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಡ ಕಛೇರಿಗಳನ್ನು ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ತಾವು ಹೇಳಿದ ಹಾಗೆ ಇನ್ನೂ ಅಧಿಕಾರಿಗಳು ಬರಲಿಲ್ಲ. ಕೂಡಲೇ ಅಧಿಕಾರಿಗಳನ್ನು ನೇಮಿಸುತಕ್ಕ ವ್ಯವಸ್ಥೆ ಮಾಡುತ್ತೇವೆ.

(೯) ರಾಷ್ಟ್ರಧ್ವಜ ಆರೋಹಣ ಮಾಡುವಾಗ ಜನತಾ ಪ್ರತಿನಿಧಿಗಳನ್ನು ಆಹ್ವಾನಿಸುವುದು

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ರಾಜ್ಯದಲ್ಲಿ ರಾಷ್ಟ್ರೀಯ ಉತ್ಸವದ ಸಂದರ್ಭಗಳಲ್ಲಿ ರಾಷ್ಟ್ರಧ್ವಜ ಆರೋಹಣ ಮಾಡುವ ಗೌರವಯುತ ಅವಕಾಶವನ್ನು ಸರಕಾರಿ ಅಧಿಕಾರಿಗಳೇ ಬಳಸಿಕೊಳ್ಳುತ್ತಿದ್ದು ಜನತೆಯ ಪ್ರತಿನಿಧಿಗಳಾದ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಈ ಸಮಾರಂಭಗಳಲ್ಲಿ ಮೂಕ ಪ್ರೇಕ್ಷಕರಾಗಿ ಭಾಗವಹಿಸಬೇಕಾಗಿದೆ. ಇದರಿಂದ ಜನತೆಯ ದೃಷ್ಟಿಯಲ್ಲಿ ಸಾರ್ವಭೌಮರಾದ ದೇಶದ ಜನತೆಯು ಆಯ್ಕೆ ಮಾಡಿರುವ ಜನತಾ ಪ್ರತಿನಿಧಿಗಳ ಸ್ಥಾನಮಾನ ಸರಕಾರಿ ಸಂಬಳ ಪಡೆಯುವ ನೌಕರರಿಗಿಂತ ಕಮ್ಮಿ ಎನ್ನುವ ಭಾವನೆಗೆ ಎಡೆಕೊಡುತ್ತದೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಸಾರ್ವಭೌಮತ್ವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಈ ಪದ್ಧತಿಯನ್ನು ತಪ್ಪಿಸಿ ಜನತಾ ಪ್ರತಿನಿಧಿಗಳಾದವರು ಅವರವರ ವ್ಯಾಪ್ತಿಯಲ್ಲಿ ಮಂತ್ರಿಗಳು, ಲೋಕಸಭಾ ಸದಸ್ಯರು, ಶಾಸನಸಭಾ ಸದಸ್ಯರುಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸರಕಾರ ಈ ದಿಸೆಯಲ್ಲಿ ತಾವು ಕೈಗೊಳ್ಳುವ ಭರವಸೆ ಕೊಡಬೇಕೆಂದೂ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಸಭೆಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಉತ್ತರವನ್ನು ಸನ್ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಷ್ಟ್ರದ ಧ್ವಜವನ್ನು ಆರೋಹಣ ಮಾಡುವ ಬಗ್ಗೆ ಪಾಲಿಸಬೇಕಾದ ನಿಯಮಗಳನ್ನು ಭಾರತ ಸರ್ಕಾರವು ರೂಪಿಸಿದೆ ಮತ್ತು ಅದನ್ನು ಭಾರತ ಸರ್ಕಾರದ ಒಳಾಡಳಿತ ಸಚವಾಲಯದಲ್ಲಿ ಹೊರಡಿಸಿರುವ ಭಾರತದ ಫ್ಲ್ಯಾಗ್ ಕೋಡ್‌ನಲ್ಲಿ ಸೇರಿಸಲಾಗಿದೆ. ಧಾರ್ಮಿಕ ಪರಂಪರೆಯಂತೆ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಹಿರಿಯ ಸರ್ಕಾರಿ ಪ್ರತಿನಿಧಿಗಳು ಎಂದರೆ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಪುಟದ ಸಚಿವರು, ಆಯುಕ್ತರುಗಳು, ಜಿಲ್ಲಾಧಿಕಾರಿಗಳು ಪಂದನೆಗಳನ್ನು ಸ್ವೀಕರಿಸುವಂತೆ ಭಾರತ ಸರ್ಕಾರವು ಶಿಳುವಳಿಕೆ ನೀಡಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರುಗಳು ಹಿರಿಯ ಪ್ರತಿನಿಧಿಗಳಾದುದರಿಂದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಅವರು ರಾಷ್ಟ್ರಧ್ವಜ ಆರೋಹಣ ಮಾಡಿ ವಂದನೆಯನ್ನು ಸ್ವೀಕರಿಸಬಹುದು.

ಅಧ್ಯಕ್ಷರು.—ಈಗ ಅವರು ಏನು ಮಾಡಬೇಕೆಂದು ಕೇಳುತ್ತಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರ ಸರ್ಕಾರದ ಫ್ಲ್ಯಾಗ್ ಕೋಡ್ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ —ಆ ಬಗ್ಗೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಅದರಲ್ಲಿ ಇರುವಂತೆ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯಕ್.—ತಹಶೀಲ್ದಾರರು ಮಾಡಬೇಕೆಂದು ಕೋಡ್‌ನಲ್ಲಿ ಕೊಟ್ಟಿದ್ದಾರೆಯೋ ಸ್ವಲ್ಪ ಓದಿ ನೋಡಿ. ಅದನ್ನು ಬರೆದಿಲ್ಲ ಎಂದರೆ ನೀವು ಆದೇಶ ಹೊರಡಿಸಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ಗೌರ್ನಮೆಂಟ್ ಆರ್ಡರ್ ಇದೆ. ಅದನ್ನು ಬೇಕಾದರೆ ನಾನು ಆಮೇಲೆ ನಾಯಕರವರಿಗೆ ತೋರಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಾನು ತಮ್ಮಿಂದ ಸರಿಯಾದ ಉತ್ತರವನ್ನು ಕೇಳುತ್ತೇನೆ. ತಹಶೀಲ್ದಾರ್‌ರ ವಿಚಾರ ಅವರಲ್ಲಿ ಬರೆದಿದ್ದಾರೆಯೇ ನೋಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸಪೂರಂಭದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದವರು ಹಾಕಿರುವ ನಿಯಮದ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಬದಲಾವಣೆ ಆಗಬೇಕಾದರೆ ಅದನ್ನು ಕೇಂದ್ರದವರು ಮಾಡಬೇಕು. ಅವರು ಬದಲಾವಣೆ ಮಾಡದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅದರಲ್ಲಿ ತಹಶೀಲ್ದಾರರು ಎಂದು ನಮೂದಿಸಿದ್ದಾರೋ ಇಲ್ಲವೋ ? ಅದನ್ನು ನೋಡಬೇಕಲ್ಲವೇ ?

ಅಧ್ಯಕ್ಷರು.—ತಹಶೀಲ್ದಾರರು ಎಂದು ಇಲ್ಲ ಅದರಲ್ಲಿ. ಡಿಗ್ನಿಟರೀಸ್ ಎಂದು ಇದೆ. ಅದನ್ನು ನೋಡಿಸುತ್ತೇನೆ. ದಯವಿಟ್ಟು ತಾವು ಕೂಡಿ. ಆ ವಿಚಾರವನ್ನು ನನಗೆ ಬಿಡಿ ನಾಯಕರೇ. ಮುಂದೆ ನಾರಾಯಣ ಸ್ವಾಮಿಯವರ ವಿಷಯ.

ಶ್ರೀ ಆರ್. ಎನ್. ನಾಯಕ್.—ನೋಡೋಣ, ಅವರು ತೋರಿಸಲಿ.

(10) ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳ ಫಲಿತಾಂಶಗಳು ತಡವಾಗುತ್ತಿರುವುದು

ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಐ.ಎ.ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಪರಿಣಾಮ ಮತ್ತು ಆಯ್ಕೆಯನ್ನು ಮೂರು ನಾಲ್ಕು ತಿಂಗಳಲ್ಲಿ ಮಾಡುತ್ತಾರೆ. ಆದರೆ ರಾಜ್ಯಕ್ಕೆ ಸೀಮಿತವಾದ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳ ಫಲಿತಾಂಶಗಳು ಪ್ರಕಟವಾಗುವುದು ಕನಿಷ್ಟ ಒಂದು ವರ್ಷವಾದನಂತರವೇ ಇನ್ನು ಆಯ್ಕೆ ಮುಂದೆ ನಾಲ್ಕು ತಿಂಗಳು. ಇದನ್ನು ಐ.ಎ.ಎಸ್. ನಂತೆ ಶೀಘ್ರ ಆಯ್ಕೆ ಮಾಡಲಾಗುವುದೆ ? ಆಗದಿದ್ದರೆ ಏಕೆ ? ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಸದನಕ್ಕೆ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಐ.ಎ.ಸ್. ಪರೀಕ್ಷೆಗಳಿಗೆ ಸುಮಾರು 1½ ಲಕ್ಷ ಅಭ್ಯರ್ಥಿಗಳು ಕೂರುತ್ತಾರೆ. ಅದಕ್ಕಾಗಿ ಆ ಪರೀಕ್ಷೆಯು ೨ ಹಂತದಲ್ಲಿ ನಡೆಸಲಾಗುತ್ತದೆ. ಮೊದಲನೆಯದು ಪೂರ್ವಭಾವಿ (ಪ್ರಿಲಿಮಿನರಿ) ಎಂದು ಕರೆಯುತ್ತಾರೆ. ಆ ಪರೀಕ್ಷೆಗೆ ಕೇವಲ ಎರಡು ವಿಷಯಗಳನ್ನು ಮಾತ್ರ ನಿಗದಿ ಮಾಡಿ ಆ ಪರೀಕ್ಷೆ ಕೂಡ ಪಸ್ತುನಿಷ್ಟ (ಆಬ್‌ಜೆಕ್ಟಿವ್ ಟೈಪ್) ಇರುತ್ತದೆ ಇದರಿಂದಾಗಿ ಈ ಪರೀಕ್ಷೆಯ ಮೌಲ್ಯಮಾಪನ ಬಹಳ ಶೀಘ್ರವಾಗಿ ಆಗುತ್ತದೆ. ಈ ಪರೀಕ್ಷೆಯ ಪರಿಣಾಮದ ಮೇಲೆ ಲಭ್ಯವಿದ್ದ ಹುದ್ದೆಗಳ ಸುಮಾರು ೧೦ ರಿಂದ ೧೩ ಪಟ್ಟು ಅಭ್ಯರ್ಥಿಗಳನ್ನು ಮುಖ್ಯ ಪರೀಕ್ಷೆಗೆ (ಮೈನ್ ಎಕ್ಸಾಮ್)ಗೆ ಕುಳಿತುಕೊಳ್ಳಲು ಆಯ್ಕೆ ಮಾಡಲಾಗುತ್ತದೆ. ನಂತರ ಈ ಅಭ್ಯರ್ಥಿಗಳಿಗೆ ಮುಖ್ಯ ಸಂಪ್ರಾದಾಯಕ ಪರೀಕ್ಷೆ ನಡೆಯುವುದರಿಂದ ಪರೀಕ್ಷಾ ಪರಿಣಾಮಗಳನ್ನು ಶೀಘ್ರವಾಗಿ ಕೊಡಲು ಕೇಂದ್ರ ಲೋಕ ಸೇವಾ ಆಯೋಗಕ್ಕೆ ಸಾಧ್ಯ